ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಗೋಮಾಳ ಜಮೀನಿನ ಕುರಿತು

ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-

1199 (1331) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕನಕಪುರ ತಾಲ್ಲೂಕಿನ ಹಾರೋಬಲೆಯ ಕಪಾಲಬೆಟ್ಟ/ಮುನೇಶ್ವರ ಬೆಟ್ಟವು ಗೋಮಾಳವಾಗಿತ್ತೇ; ಸರ್ವೆ ನಂ, ಖಾತೆ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು;

(ಆ) ಕನಕಪುರ ತಾಲ್ಲೂಕಿನ ಹಾರೋಬಲೆಯ ಮುನೇಶ್ವರ ಬೆಟ್ಟವನ್ನು ಕಪಾಲ ಬೆಟ್ಟ,ಯೇಸು ಬೆಟ್ಟ ಎಂದು ಗುರುತಿಸಲು ಸರ್ಕಾರ ಅನುಮತಿ ನೀಡಿದೆಯೇ; ಹೆಸರು ಬದಲಾವಣೆಗೆ ಪ್ರಸ್ತಾವನೆಯನ್ನು ಸಲ್ಲಿಸಿದವರು ಯಾರು; ಯಾವಾಗ ಸಲ್ಲಿಸಲಾಯಿತು; ಸರ್ಕಾರ ಹೆಸರು ಬದಲಾವಣೆಗೆ ಅನುಮತಿ ನೀಡಿದ್ದು ಯಾವಾಗ; ಇಲ್ಲವಾದಲ್ಲಿ, ಅನಧಿಕೃತವಾಗಿ ಹೆಸರು ಬದಲಾವಣೆ ಮಾಡಿದ ವ್ಯಕ್ತಿಗಳ ವಿರುದ್ಧ ಸಾರ್ವಜನಿಕ ಸ್ಥಳಕ್ಕೆ ಸರ್ಕಾರಿ ಜಾಗಕ್ಕೆ ಹಾನಿ ಮಾಡಿರುವ ಕಾರಣಕ್ಕೆ ಯಾವ ಕ್ರಮಕೈಗೊಳ್ಳಲಾಗಿದೆ;

(ಇ) ಕನಕಪುರ ತಾಲ್ಲೂಕಿನ ಹಾರೋಬಲೆಯ ಕಪಾಲ ಬೆಟ್ಟವನ್ನು ಯಾವ ಸಂಸ್ಥೆಗೆ, ಯಾವ ಉದ್ದೇಶಕ್ಕಾಗಿ, ಯಾವಾಗ ಮಂಜೂರು ಮಾಡಲಾಗಿರುತ್ತದೆ; (ಮಂಜೂರಾತಿ ಆದೇಶ ಪ್ರತಿಯೊಂದಿಗೆ ಮಾಹಿತಿ ನೀಡುವುದು)

(ಈ) ಕನಕಪುರ ತಾಲ್ಲೂಕಿನ ಹಾರೋಬಲೆಯ ಕಪಾಲ ಬೆಟ್ಟವನ್ನು ಮಂಜೂರು ಮಾಡುವ ಸಮಯದಲ್ಲಿ ಎಷ್ಟು ಮೊತ್ತವನ್ನು ಸರ್ಕಾರ ಪಾವತಿಸಲಾಗಿದೆ; ಸರ್ಕಾರ ಜಮೀನು ಮಂಜೂರಾತಿಗಾಗಿ ನಿಗಧಿಪಡಿಸಿದ ಮೊತ್ತವೆಷ್ಟು;

(ಉ) ಗೋಮಾಳ ಜಮೀನನ್ನು ಮಂಜೂರು ಮಾಡುವ ಸಮಯದಲ್ಲಿ ಸಂಬಂಧಿಸಿದ ಸಂಸ್ಥೆಗೆ ವಿಧಿಸಲಾದ ಷರತ್ತುಗಳೇನು; ಆ ಸಂಸ್ಥೆಯವರು ಸರ್ಕಾರ ತಿಳಿಸಿದ ಎಲ್ಲಾ ಷರತ್ತುಗಳನ್ನು ಪೂರೈಸಿದ್ದಾರೆಯೇ; ಇಲ್ಲದಿದ್ದಲ್ಲಿ, ಷರತ್ತುಗಳನ್ನು ಪೂರೈಸದ ಕಾರಣಕ್ಕೆ ಸರ್ಕಾರ ಜಮೀನು ಪಡೆದುಕೊಂಡಿರುವ ಸಂಸ್ಥೆಯ ವಿರುದ್ಧ ಯಾವ ಕ್ರಮ ಕೈಗೊಂಡಿದೆ ?